# ನಟಿಯ ರಾಜಕಾರಣ

ಹಣೆಮೇಲೆ ಅಗಲವಾದ ಢಾಳು ಕುಂಕುಮ. ಗುಂಡಗಿನ ಮುಖ. ಕುಳ್ಳಗಿನ ದೇಹ. ಥೇಟ್ ದಕ್ಷಿಣ ಭಾರತದ ಅನಾಟಮಿ. ಅತ್ತರೆ ಮುಖವಿಡೀ ದುಃಖತಪ್ತ ಭಾವ. ನಕ್ಕರೆ ಅದೇ ಮುಖದಲ್ಲಿ ಹೂಗಳು ಅರಳಿದಂಥ ಚೆಲುವು. ಇಂತಿಪ್ಪ ನಟಿ 1990ರ ದಶಕದ ಪ್ರಾರಂಭದಲ್ಲಿ ಅವಕಾಶ ಸಿಗಲು ಪರದಾಡಿದ್ದರು. ಸಂಕೇತ್ ಸ್ಟುಡಿಯೋದಲ್ಲಿ ಕುಳ್ಳಗಿನ ಜನಪ್ರಿಯ ನಟ, ನಿರ್ಮಾಪಕರ ಕಣ್ಣಿಗೆ ಬಿದ್ದದ್ದೇ ಅದೃಷ್ಟ ಖುಲಾಯಿಸಿತು. ಆ ನಿರ್ಮಾಪಕ ತಾವೇ ನಿರ್ದೇಶಿಸಿದ ಲೋ ಬಜೆಟ್ ರೀಮೇಕ್ ಚಿತ್ರದ ನಾಯಕಿಯಾಗಿ ಇವರನ್ನು ಆರಿಸಿದರು. ಮೇಕಪ್ ಟೆಸ್ಟ್ ಮಾಡಿಸಿ, ಹೊಸ ಹೆಸರನ್ನೂ ಇಟ್ಟರು. ಆ ಹೆಸರೇ ಇವತ್ತಿಗೂ ಉಳಿದುಕೊಂಡಿದ್ದು, ನಟಿಯ ಮೂಲ ಹೆಸರು ಬಹುತೇಕ ಪ್ರೇಕ್ಷಕರಿಗೆ ಗೊತ್ತಿಲ್ಲ. ವಿಷ್ಣುವರ್ಧನ್, ಅಂಬರೀಷ್, ಶಿವರಾಜ್‌ಕುಮಾರ್, ರಮೇಶ್, ಶಶಿಕುಮಾರ್, ಜಗ್ಗೇಶ್, ದೇವರಾಜ್, ಸುನಿಲ್, ಅಭಿಜಿತ್, ರಾಮ್‌ಕುಮಾರ್ ಹೀಗೆ ಎಲ್ಲ ನಾಯಕರ ಜೊತೆ ಅಭಿನಯಿಸಿದ ಅಗ್ಗಳಿಕೆ ಇವರದ್ದು.

ಮೊದಲು ತಂಗಿಯಾಗಿ ಒಂದು ಸಿನಿಮಾದಲ್ಲಿ ಅವಕಾಶ ಗಿಟ್ಟಿಸಿದ ಅವರು ನಾಯಕಿಯಾಗಿದ್ದು ಅದನ್ನು ಮರೆಮಾಚಿ ಎನ್ನುವುದು ಸಿನಿಮೀಯ ಸತ್ಯ. ಒಂದು ವೇಳೆ ಅವರು ಅದಾಗಲೇ ತಂಗಿಯ ಪಾತ್ರದಲ್ಲಿ ನಟಿಸಿರುವುದನ್ನು ಹೇಳಿಕೊಂಡಿದ್ದಿದ್ದರೆ ನಾಯಕಿಯಾಗುವ ಅವಕಾಶ ತಪ್ಪಿ ಹೋಗುತ್ತಿತ್ತು.

ಅವಕಾಶದತ್ತ ಮುಖಮಾಡಿದ್ದ ದಿನಗಳಲ್ಲಿ ಮಳೆಯಲ್ಲಿ ಬಿಳಿ ಸೀರೆ ಉಟ್ಟುಕೊಂಡು ನೆನೆಯಲು ಹಿಂಜರಿಯದೇ ಇದ್ದ ನಟಿ ಆಮೇಲೆ ತಮ್ಮ ಅಭಿನಯ ಪ್ರತಿಭೆಯಿಂದಷ್ಟೇ ಗುರುತಾದರು. ಗ್ಲಾಮರ್ ಪಾತ್ರಗಳಿಗೆ ತಾವು ಅಷ್ಟಾಗಿ ಹೊಂದುವುದಿಲ್ಲ ಎಂದು ಆಗೀಗ ಹೇಳಿಕೊಂಡಿದ್ದೂ ಇದೆ. ಹಾಗಂತ ಅವರು ಆಧುನಿಕ ಉಡುಗೆಗಳನ್ನು ಧಿಕ್ಕರಿಸಿದವರೇನಲ್ಲ.

ಸಿನಿಮಾ ಪಟ್ಟುಗಳನ್ನು ಅರಿತಿದ್ದ ನಿರ್ದೇಶಕರೊಬ್ಬರನ್ನು ವರಿಸಿದ ನಟಿ ಅವರೊಟ್ಟಿಗೆ ಹನ್ನೊಂದು ವರ್ಷಗಳ ತುಂಬು ಜೀವನ ನಡೆಸಿದರು. ಇಬ್ಬರೂ ನಾಯಕ–ನಾಯಕಿಯಾಗಿ ಒಂದು ಸಿನಿಮಾದಲ್ಲಿ ನಟಿಸಿ, ತಮ್ಮ ದಾಂಪತ್ಯ ಗೀತೆಯನ್ನು ಪರೋಕ್ಷವಾಗಿ ಜಾಹೀರುಗೊಳಿಸಿದರು.

ಸಿಕ್ಕಿದ ಮಹಿಳಾ ಪ್ರಧಾನ ಚಿತ್ರಗಳಲ್ಲಿ ಹೆಂಗಳೆಯರ ಕರುಳು ಹಿಂಡುವಂತೆ ಅತ್ತು, ಪ್ರೇಕ್ಷಕರ ಕಣ್ಣಲ್ಲೂ ನೀರು ತರಿಸಿದ ಪ್ರತಿಭಾವಂತೆ ಇವರು. ಮದುವೆ ಮುರಿದುಬಿದ್ದಾಗ ಇವರ ಪತಿ ಕೂಡ ಕಣ್ಣೀರಿಟ್ಟಿದ್ದರಂತೆ. 'ಹಳೆ ಗಂಡನ ಪಾದವೇ ಗತಿ' ಎನ್ನುವ ಜಾಯಮಾನ ಇವರದ್ದಲ್ಲ. ಪ್ರೀತಿ ಹುಟ್ಟಲು ವಯಸ್ಸಿಗಿಂತ ಮನಸ್ಸು ಮುಖ್ಯ ಎಂದು ಪ್ರತಿಪಾದಿಸಿದ ಇವರು ಎರಡನೇ ಮದುವೆಯಾದ ಸಂದರ್ಭದಲ್ಲಿ ಗಟ್ಟಿಮೇಳ ಇರಲಿಲ್ಲ, ಎದುರಲ್ಲಿ ಚಾನೆಲ್‌ಗಳ ಕ್ಯಾಮೆರಾಗಳ ಕಣ್ಣುಗಳಿದ್ದವು.

ಮುಗ್ಧ ಚಹರೆಯ ನಾಯಕಿಗೆ ರಾಜಕೀಯ ಎಂದರೆ ಮೊದಲಿನಿಂದಲೂ ಆಸಕ್ತಿ. ನಟಿಯಾಗಿ ತಮಗೆ ಇರುವ ಅಭಿಮಾನಿಗಳನ್ನೇ ಮತದಾರರು ಎಂದುಕೊಳ್ಳುವುದು ತಪ್ಪು ಎಂದು ಮೊನ್ನೆಮೊನ್ನೆ ವಾಹಿನಿಯಲ್ಲಿ ಹೇಳಿಕೊಂಡರು. ಹಳೆಯ ಗಂಡ, ಹೊಸ ಗಂಡ ಇಬ್ಬರನ್ನೂ ಬದಿಗೆ ಸರಿಸಿ, ರಾಜಕೀಯದ ಪಟ್ಟುಗಳಲ್ಲಿ ತಮ್ಮನ್ನು ತಾವು ಗಟ್ಟಿ ಮಾಡಿಕೊಳ್ಳುವುದರಲ್ಲಿ ತೊಡಗಿರುವ ನಟಿಗೆ ಅಭಿನಯದ ಹದ ಸಿದ್ಧಿಸಿದೆ. ಕೆ.ಬಾಲಚಂದರ್ ತರಹದ ನಿರ್ದೇಶಕರ ಗರಡಿಯಲ್ಲಿ ತಮಿಳು ಚಿತ್ರದಲ್ಲೂ ನಟಿಸಿದ ಅನುಭವ ಇದ್ದಮೇಲೆ ಅಷ್ಟೂ ಪ್ರತಿಭೆ ಇರದಿದ್ದರೆ ಹೇಗೆ? ಹೆಚ್ಚು ಅವಕಾಶಗಳು ಇಲ್ಲದಿದ್ದರೂ ನಟಿ ಈಗ ಚೂಸಿಯಾಗಿಯೇ ಉಳಿದಿದ್ದಾರೆ. ಪ್ರಶಸ್ತಿ ತಂದುಕೊಡಬಲ್ಲ ಅವಕಾಶ ಎದುರಿಗೆ ಬಂದರೆ ಹಿಂದೂಮುಂದೂ ನೋಡದೆ ಒಪ್ಪಿಕೊಳ್ಳುತ್ತಾರೆ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68